ದಿನಾಂಕ 10-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಶ್ರೀ. ಜಿ. ಎಸ್. ಆರ್. ಕೆ. ಪ್ರತಿವಾದಿ ಪರ ವಕೀಲರಿಂದಃ-**

1. ನನಗೆ ವಾದಿಗಳ ಪರಿಚಯ ಇದೆ. ವಾದಿಗೆ ಸರ್ವೆ ನಂ.103 ರಲ್ಲಿ ಹೊಲ ಇದೆ. ಒಟ್ಟು 6 ಎಕರೆ ಹೊಲ ಇದೆ. ವಾದಿಗೆ ಯಾವುದೇ ಹೊಲ ಇಲ್ಲ ಎಂದರೆ ಸರಿಯಲ್ಲ. ವಾದಿ ನನಗೆ 22 ವರ್ಷಗಳಿಂದ ಪರಿಚಯ. ಅವರು ನನಗೆ ಪರಿಚಯಸ್ಥರು ಆದ್ದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಅಮ್ಮಾಜಿರವರು ಸತ್ಯಬಾಬು ಎನ್ನುವವರಿಗೆ 1 ಎಕರೆ ಆಸ್ತಿಯನ್ನು ಮಾರಾಟ ಮಾಡಿದ್ದರು. ಪ್ರತಿವಾದಿಗಳಿಗೆ ಆಸ್ತಿಯನ್ನು ಕೊಟ್ಟ ಬಗ್ಗೆ ಏನಾದರೂ ಗೊತ್ತಾ ಎಂದರೆ ಸಾಕ್ಷಿಯು ಒಟ್ಟು ನಾವು 5 ಎಕರೆ ಕೊಟ್ಟಿರುತ್ತೇವೆ ಎನ್ನುತ್ತಾರೆ. ಅಲ್ಲಿ ನನಗೆ ಯಾವುದೇ ಹೊಲ ಇಲ್ಲ. ವಾದಿಗಳು ನಮಗೆ ಪರಿಚಯಸ್ಥರು ಆದ್ದರಿಂದ ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

3. ಹೊಲ ಸರ್ವೆ ಮಾಡಿದರ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಸರ್ವೆ ಸಲುವಾಗಿ ಅಪೀಲು ಹೋಗಿದ್ದರ ಬಗ್ಗೆ ನಮಗೆ ಗೊತ್ತಿಲ್ಲ.

4. ಪ್ರತಿವಾದಿಯ ದಾಖಲಾತಿಗಳಲ್ಲಿ 2 ಎಕರೆ 11 ಗುಂಟೆ ಆಸ್ತಿಯನ್ನು ವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದನ್ನು ಉಳಿಸಿಕೊಳ್ಳಲು ಈ ರೀತಿ ಸುಳ್ಳು ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಈ 2 ಎಕರೆ 11 ಗುಂಟೆ

ಆಸ್ತಿಯಲ್ಲಿ ವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂಗಿ ಪ್ರತಿವಾದಿಗಳಿಗೆ ಆಸ್ತಿಯನ್ನು ಮಾರಾಟ ಮಾಡಿದ್ದಾಳೆ ಎಂದರೆ ಪ್ರತಿವಾದಿಗಳಿಗೆ ಮಾರಾಟ ಮಾಡಿಲ್ಲ, ಸಂತೆ ಬಾಬು ಎನ್ನುವವರಿಗೆ ಮಾರಾಟ ಮಾಡಿದ್ದಾಳೆ ಎನ್ನುತ್ತಾರೆ.

5. ಸಾಕ್ಷಿಗೆ ನಿಪಿ-5 ನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಅಮ್ಮಾಜಿ ನನ್ನ ತಂಗಿ ಎಂದು ತಮ್ಮ ತಂಗಿಯ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ಸದರಿ ಫೋಟೋದ ಭಾಗವನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

6. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡಲು ನೀವು ಸುಳ್ಳು ಮುಖ್ಯವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.